ಕೋವಿಡ್ ಸೋಂಕು ತಡೆಯುವ ನಿಟ್ಟಿನಲ್ಲಿ ಹೇರಿದ ಲಾಕ್‌ಡೌನ್ ಸಂದರ್ಭದಲ್ಲಿ ವಿಡಿಯೊ ಕಾನ್ಫರೆನ್ಸ್ ಮೂಲಕ ಆಪ್ತ ಸಮಾಲೋಚನೆ ಮಾಡುವ ಪ್ರಕ್ರಿಯೆ ಹೆಚ್ಚು ಜನಪ್ರಿಯವಾಯಿತು. ಕೆಲವೊಮ್ಮೆ ಅನಾಮಿಕತೆಯನ್ನು ಕಾಪಾಡುವ ದೃಷ್ಟಿಯಿಂದ ಆನ್‌ಲೈನ್ ಮಾಧ್ಯಮ ಸ್ವಲ್ಪ ಮಟ್ಟಿಗೆ ಸಹಾಯಕ ಎಂದೂ ಅನಿಸುತ್ತದೆ. ಆದರೆ ಸಮಾಲೋಚಕರ ಬಳಿ ಮಾತನಾಡುವ ವ್ಯಕ್ತಿಯ ಮಾತುಗಳು ಎಷ್ಟು ಮುಖ್ಯವೋ, ಆತನ ಹಾವಭಾವ, ಕಣ್ಣೋಟ, ಉಡುಪಿನಲ್ಲಿ ತೋರುವ ಆಸ್ಥೆ... ಎಲ್ಲವೂ ಒಂದಲ್ಲಾ ಒಂದು ವಿಚಾರವನ್ನು ಸಂವಹನ ಮಾಡುತ್ತಿರುತ್ತದೆ. ಸಮಾಲೋಚಕರು ಇವುಗಳ ಮೂಲಕವೂ ಅವರ ಅಂತರಂಗವನ್ನು ಅರಿಯುವ ಪ್ರಯತ್ನ ಮಾಡುತ್ತಾರೆ. ಆದ್ದರಿಂದ ಅನಿವಾರ್ಯ ಸಂದರ್ಭಗಳಲ್ಲಷ್ಟೇ ವಿಡಿಯೊ ಕಾನ್ಫರೆನ್ಸ್ ಮೂಲಕ ಆಪ್ತ ಸಮಾಲೋಚನೆ ಮಾಡಬಹುದು. ಎಲ್ಲಕ್ಕಿಂತ ಮುಖ್ಯವಾಗಿ ಒಬ್ಬ ವ್ಯಕ್ತಿಯು, 'ಏನಾಗಲ್ಲ... ಟೇಕ್ ಕೇರ್...' ಎಂದು ಬೆನ್ನು ತಟ್ಟಿದಾಗ ಸಿಗುವ ಸಾಂತ್ವನವೂ ಎಷ್ಟೋ ಬಾರಿ ಸಮಸ್ಯೆಯನ್ನು ಬಗೆಹರಿಸಲು ಶಕ್ತಿ ಕೊಡುತ್ತದೆ.

ಶ್ರೀಲತಾ ಅವರ ಅನುಭವ ನೋಡಿ. ಅವರು ತಮ್ಮ ಮಗಳ ಸಮಸ್ಯೆ ಪರಿಹರಿಸಲು ವಿಡಿಯೊ ಕಾನ್ಫರೆನ್ಸ್ ಮಾಧ್ಯಮವೇ ಉತ್ತಮವೆಂದು ನಿರ್ಧರಿಸಿದರು. ಆಗಷ್ಟೇ ವರ್ಗಾವಣೆಯಾಗಿ ಬೇರೆ ಊರಿಗೆ ಬಂದ ಶ್ರೀಲತಾ ಅವರ ಮಗಳಿಗೆ ತನ್ನ ಸ್ನೇಹಿತರನ್ನು ಬಿಟ್ಟುಬಂದ ಬೇಸರ ಕಾಡಿತ್ತು. ಹೊಸ ಪರಿಸರ, ಆಡುಭಾಷೆಯಲ್ಲಿ ವ್ಯತ್ಯಾಸ... ದೂರವಾದ ಬಂಧುಬಳಗ, ಮನೆಯೊಳಗೆ ಒಂಟಿಯಾಗಿ ದೀರ್ಘ ಕಾಲ ಇರಬೇಕಾದ ಪರಿಸ್ಥಿತಿ – ಇವೆಲ್ಲವೂ ಸೇರಿ ಪ್ರಿಯಾಳ ಮನಸ್ಸು ಖಿನ್ನತೆಗೆ ಜಾರಿತ್ತು. ಅಮ್ಮ ಆಫೀಸಿಗೆ ಹೋದ ಕೂಡಲೇ ಮಗಳು ಬಾಗಿಲು ಹಾಕಿಕೊಂಡು ಅಳುತ್ತಾ ಕೂರುತ್ತಿದ್ದಳು. ಹಲವು ದಿನಗಳ ಬಳಿಕ ಈ ವಿಷಯ ಅಮ್ಮನ ಅರಿವಿಗೆ ಬಂದಿತ್ತು. ತನ್ನೂರಿನಲ್ಲಿಯೇ ಇದ್ದ ಆಪ್ತ ಸಮಾಲೋಚಕರ ಬಳಿ ಮಾತನಾಡಿದ ಶ್ರೀಲತಾ, ವಿಡಿಯೊ ಕಾನ್ಫರೆನ್ಸ್ ಮೂಲಕ ಒಂದಿಷ್ಟು ಹೊತ್ತು ಮಾತನಾಡುವಂತೆ ಮನವಿ ಮಾಡಿದಳು. ಆ ಊರಿಗೆ ಪ್ರಸಿದ್ಧ ಸಮಾಲೋಚಕರೆಂದು ಗುರುತಿಸಿಕೊಂಡಿದ್ದ ಅವರು ಹದಿಹರೆಯದವರ ಸಮಸ್ಯೆಗಳನ್ನು ಬಲ್ಲವರು. ಶ್ರೀಲತಾಳ ಕೋರಿಕೆಗೆ ಅವರು ಒಪ್ಪಿಗೆ ಸೂಚಿಸಿದರು. ಸಮಯ ನಿಗದಿ ಮಾಡಿ ಮಾತು ಶುರು ಮಾಡಿದಾಗ, ಸಮಾಲೋಚಕರು ಕೇಳಿದ ಪ್ರಶ್ನೆಗಳಿಗೆ ಪ್ರಿಯಾ ಒಂದೆರಡು ಉತ್ತರಗಳನ್ನು ಕೊಟ್ಟಿದ್ದಾಯಿತು. 'ಮುಂದಿನ ಅವಧಿಯನ್ನು ಸದ್ಯವೇ ನಿಗದಿ ಮಾಡುವೆ' ಎಂದವರು ಮಾತು ಮುಗಿಸಿದರು. ಮುಂದಿನ ಅವಧಿಯನ್ನು ಶ್ರೀಲತಾಳೇ ನಿಗದಿ ಮಾಡಿ, ಮತ್ತೆ ಮಾತಿಗೆ ಕುಳಿತಾಗ ಮಾತುಕತೆಯೇನೂ ಫಲಪ್ರದವಾಗಲಿಲ್ಲ. ಶ್ರೀಲತಾ ಪ್ರತ್ಯೇಕವಾಗಿ ಫೋನ್ ಮಾಡಿದಾಗ, 'ನಿಮ್ಮ ಮಗಳು ಬಹಳವೇ ಉಡಾಫೆ ಪ್ರವೃತ್ತಿಯವಳೆಂದು ಕಾಣುತ್ತದೆ. ಅಷ್ಟೊಂದು ಗರ್ವ ಇರುವುದು ಒಳ್ಳೆಯದಲ್ಲ...' ಎಂದು ಅಸಮಾಧಾನ ವ್ಯಕ್ತಪಡಿಸಿದರು. 'ಕನ್ನಡ ಮಾಧ್ಯಮದ ಹುಡುಗಿ, ಮುಕ್ತವಾಗಿ ಮಾತನಾಡಲು ಹಿಂಜರಿದಿರಬಹುದು' ಎಂದು ಶ್ರೀಲತಾ ಪರಿಸ್ಥಿತಿ ತಿಳಿಗೊಳಿಸಲು ಪ್ರಯತ್ನಿಸಿದರೂ, ಒಟ್ಟು ಸಮಾಲೋಚನಾ ಪ್ರಕ್ರಿಯೆ ಯಾವುದೇ ಫಲ ನೀಡಲಿಲ್ಲ. 'ಐದು ನಿಮಿಷಗಳಂತೆ ಮೂರು ಬಾರಿ ನಡೆದ ಮಾತುಕತೆಗೆ ಎರಡು ಸಾವಿರ ರೂಪಾಯಿ ವ್ಯಯಿಸಿದ್ದೇ ಆಯಿತು' ಎಂದು ಶ್ರೀಲತಾ ಬೇಸರ ವ್ಯಕ್ತಪಡಿಸುತ್ತಾರೆ.

## ಜನಸಂಖ್ಯೆಗೆ ತಕ್ಕಷ್ಟು ಸಮಾಲೋಚಕರಿಲ್ಲ

ನಮ್ಮ ರಾಜ್ಯದ ಜನಸಂಖ್ಯೆಗೆ ತಕ್ಕಷ್ಟು ಸಮಾಲೋಚಕರ ಲಭ್ಯತೆ ಇಲ್ಲದೇ ಇರುವುದರಿಂದ ಅನೇಕ ಬಾರಿ ಈ ವೃತ್ತಿಗೆ ಬೇಕಾದ ಸ್ವಭಾವ ಇಲ್ಲದೇ ಇರುವವರೂ, ಸಂಬಂಧಿಸಿದ ಕೋರ್ಸುಗಳನ್ನು ಮಾಡಿಕೊಂಡು ಇದನ್ನೊಂದು ವೃತ್ತಿಯನ್ನಾಗಿ ತೆಗೆದುಕೊಂಡಿರುತ್ತಾರೆ. ಆದರೆ ಸೇವಾ ಮನೋಭಾವದ, ತಾಳ್ಮೆಯ ಮಹಾಪೂರವನ್ನೇ ಬಯಸುವ ವೃತ್ತಿಯಿದು. ಎಷ್ಟೋ ಬಾರಿ ನಿರಂತರ ಆಪ್ತ ಸಮಾಲೋಚನೆ ನಡೆಸಿದ ಬಳಿಕ, ಸಮಾಲೋಚಕರಿಗೂ ಒಂದು ಬ್ರೇಕ್ ಬೇಕಾಗುತ್ತದೆ. ಅವರೂ ಮತ್ತೊಬ್ಬರು ಸಮಾಲೋಚಕರ ಬಳಿ ಒಂದಿಷ್ಟು ಹೊತ್ತು



> ತಮ್ಮ ಬಳಿಗೆ ಬರುವವರು ಹೇಳಿಕೊಂಡ ಸಂಗತಿಗಳ ಗೌಪ್ಯತೆ ಕಾಪಾಡುವುದು ಆಪ್ತ ಸಮಾಲೋಚಕರ ಮುಖ್ಯ ಜವಾಬ್ದಾರಿಗಳಲ್ಲಿ ಒಂದು. ಆದ್ದರಿಂದಲೇ, ಪರಿಚಿತ ವ್ಯಕ್ತಿಗಳನ್ನು ಎಂದೂ ಆಪ್ತ ಸಮಾಲೋಚನೆ ಮಾಡಕೂಡದು ಎನ್ನುವ ನಿಯಮವಿದೆ. ಸಂಕಟಗಳನ್ನು ಹೇಳುವ ವ್ಯಕ್ತಿಗೆ ನಾವು ಅನಾಮಿಕರಾಗಿದ್ದಷ್ಟೇ ಧೈರ್ಯ ಮೂಡುತ್ತದೆ. ತನ್ನ ಜಗತ್ತಿನ ವ್ಯಕ್ತಿಗಳು ಈತನಿಗೆ/ಈಕೆಗೆ ಗೊತ್ತಿಲ್ಲ ಎನ್ನುವ ಕಾರಣದಿಂದಲೇ ಅವನು ತನ್ನ ಗುಟ್ಟುಗಳನ್ನು ಬಯಲು ಮಾಡಲು ಸಿದ್ಧನಾಗುತ್ತಾನೆ. ಆಪ್ತ ಸಮಾಲೋಚನೆಯಲ್ಲಿ 'ಆಪ್ತ' ಎನ್ನುವ ಪದವೇ ಖಾಸಗಿತನವನ್ನು ಕಾಪಾಡುವ ಸಂಗತಿಗೆ ಸಂಬಂಧಿಸಿದ್ದಾಗಿದೆ.
>
> **-ವಸುಧೇಂದ್ರ**, ಲೇಖಕ, ಆಪ್ತ ಸಮಾಲೋಚಕ

